-10-

**<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ</u>**

**<u>ಸತ್ರ ಪ್ರಕರಣ ಸಂಖ್ಯೆ:26/2025</u>**

**ದಿನಾಂಕ: 26.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

**<u>ಪಾಟೀ ಸವಾಲು: ಆರೋಪಿ ಪರ ಶ್ರೀ.ಆರ್.ಎ.ಕೆ. ವಕೀಲರಿಂದ:</u>**

16. ನನಗೂ ಮತ್ತು ನಾಗರಾಜ್ ರವರಿಗೆ ಮದುವೆಯಾಗುವ ಪೂರ್ವದಲ್ಲಿ ಬೇರೆ ಮದುವೆಯಾಗಿತ್ತು. ಸದರಿ ಮದುವೆಯಿಂದ ನನಗೆ ಮಕ್ಕಳಾಗಿರಲಿಲ್ಲ. ನಾಗರಾಜ್ ರವರನ್ನು ಮದುವೆಯಾಗುವ ಪೂರ್ವದಲ್ಲಿ ನನಗೆ ಒಂದೆ ಮದುವೆಯಾಗಿತ್ತು. ನಮ್ಮ ಪ್ರಕಾರ ನಿಮಗೆ ನಾಗರಾಜ್ ರವರನ್ನು ಮದುವೆಯಾಗುವ ಪೂರ್ವದಲ್ಲಿ ಎರಡು ಮದುವೆಗಳಾಗಿದ್ದವು ಎಂದರೆ ಸರಿಯಲ್ಲ. ನಾವು ಮೂರು ಜನ ಅಕ್ಕ ತಂಗಿಯಂದಿರು. ನನಗೆ ಇಬ್ಬರು ತಂಗಿಯರಿದ್ದು, ಸ್ವಾತಿ ಮತ್ತು ಸಿಂದು ಆಗಿರುತ್ತಾರೆ. ಸ್ವಾತಿರವರು ಮದುವೆಯಾಗಿ ಗಂಡನೊಂದಿಗೆ ಇರುತ್ತಾರೆ. ಸಿಂದುವಿಗೆ ಮದುವೆಯಾಗಿರುತ್ತದೆ, ಆದರೆ ಆಕೆಯನ್ನು ಗಂಡ ಬಿಟ್ಟಿರುತ್ತಾರೆ.

-11-

17. ನನ್ನ ಮೊದಲನೇ ಗಂಡ ತೀರಿಕೊಂಡ ನಂತರ ನಾನು ನಾಗರಾಜ್ ರವರನ್ನು ಮದುವೆಯಾಗಿರುತ್ತೇನೆ. ನನ್ನ ಮೊದಲನೇ ಗಂಡ ಹಿಂದೂಪುರದ ವಾಸಿಯಾಗಿದ್ದರು, ಅವರಿಗೆ ತಂದೆ-ತಾಯಿ ಯಾರು ಇರಲಿಲ್ಲ. ಅವರ ಮನೆಯಲ್ಲಿ ಯಾರು ಇರುವುದಿಲ್ಲ. ನಾನು ಅವರ ಮನೆಯಲ್ಲಿ ಭಾಗ ಬರಬೇಕು ಎಂದು ಪ್ರಕರಣವನ್ನು ದಾಖಲಿಸಿರುವುದಿಲ್ಲ. ನಾನು ಈಗ ಲೇಪಾಕ್ಷಿಯಲ್ಲಿ ನನ್ನ ತಾಯಿಯ ಮನೆಯಲ್ಲಿರುತ್ತೇನೆ. ನಾಗರಾಜ್ ರವರ ಮನೆಯ ಲೇಪಾಕ್ಷಿಯ ಪಕ್ಕದಲ್ಲಿ ಬಿಂಗಿಪಲ್ಲಿ ನಾಗರಾಜ್ ನನ್ನನ್ನು ಮದುವೆಯಾಗುವ ಪೂರ್ವದಲ್ಲಿ ದೊಡ್ಡಬಳ್ಳಾಪುರದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸದರಿ ಸಮಯ ನಾಗರಾಜ್ ಟಿಟಿಗಳನ್ನು ಇಟ್ಟುಕೊಂಡು ಚಾಲನೆ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ, ಆದರೆ ಆತನ ಪರಿಚಯವಾದಗ ಆತ ಟಮೋಟ ಮತ್ತು ಹಣ್ಣುಗಳ ವ್ಯಾಪಾರ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಚೆನ್ನಾಗಿ ವ್ಯಾಪಾರ ಮಾಡಿ ಸಂಪಾದನೆ ಮಾಡುತ್ತಿದ್ದರು. ಸಂಪಾದನೆ ಮಾಡಿದ ಹಣವನ್ನು ನನಗೆ ನೀಡುತ್ತಿರಲಿಲ್ಲ. ಹಾಗೇ ಸಂಪಾದನೆ ಮಾಡಿದ ಹಣವನ್ನು ನಾಗರಾಜು ನೀಡದೇ ಇದ್ದುದರಿಂದ ನಾವು ಬೇರೆಯಾದೇವು ಎಂದರೆ ಸರಿಯಲ್ಲ. ನಾನು



ನಾಗರಾಜುರವರನ್ನು ಮದುವೆಯಾದ ನಂತರ ಅವರ ಮನೆಯಲ್ಲೇ ಇದ್ದೆ, ಆತನಿಗೆ

ತಾಯಿ ಇರುವುದಿಲ್ಲ, ತಂದೆ ಇರುತ್ತಾರೆ. ನಾಗರಾಜುರವರ ತಂದೆ ಬೇರೆ ಮನೆಯಲ್ಲಿ ಪ್ರತ್ಯೇಕವಾಗಿ ಸ್ವಂತ ಮನೆಯಲ್ಲಿ ವಾಸವಿದ್ದರು, ನಾಗರಾಜುರವರು ಹೊಸ ಮನೆಯಲ್ಲಿ ವಾಸವಿದ್ದರು. ನಾಗರಾಜುರವರು ಹೊಸದಾಗಿ ನಿರ್ಮಾಣ ಮಾಡಿದ ಮನೆ ಈಗ ನನ್ನ ಸುಪರ್ಧಿಯಲ್ಲಿರುತ್ತದೆ. ನಾಗರಾಜ್ ರವರು ತಂದೆ ಕಟ್ಟಿದ್ದ ಮನೆಯನ್ನು ಬೀಳಿಸಿ ನನ್ನ ಗಂಡ ನಾಗರಾಜುರವರು ಹೊಸದಾಗಿ ಮನೆ ಕಟ್ಟಿರುತ್ತಾರೆ. ನಾಗರಾಜುರವರ ತಂದೆ ಈಗ ಅವರ ಮನೆಯಲ್ಲಿರುತ್ತಾರೆ. ನಾಗರಾಜುರವರನ್ನು ನಾನು ಮದುವೆಯಾದ ನಂತರ ಅವರ ತಂದೆಯೊಂದಿಗೆ ಮಾತುಕತೆ ನನಗೆ ಇರುವುದಿಲ್ಲ. ಘಟನೆ ನಡೆಯಿತು ಎನ್ನಲಾದ ಆರು ತಿಂಗಳ ಪೂರ್ವದಿಂದ ನನಗೂ ಮತ್ತು ನಾಗರಾಜುರವರ ನಡುವೆ ಸಂಬಂಧ ಸರಿ ಇರಲಿಲ್ಲ. ನಾನು ನಾಗರಾಜುರವರ ತಂದೆಯನ್ನು ಮನೆಯಿಂದ ಓಡಿಸಿದ್ದರಿಂದ ನಾಗರಾಜುವಿಗೂ ನನಗೂ ಸಂಬಂಧ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ನಾಗರಾಜು ರವರ ತಂದೆಯ ಹೆಸರಿನಲ್ಲಿದ್ದ ಮನೆ ಈಗ ನನ್ನ ಹೆಸರಿನಲ್ಲಿದೆ ಎಂದರೆ ಸರಿ. ನಾಗರಾಜು ರವರ ತಂದೆಯವರನ್ನು ಮನೆಯಿಂದ ಓಡಿಸಿ ತನ್ನ ಹೆಸರಿಗೆ ಆ ಮನೆಯ ಖಾತೆಯನ್ನು ಮಾಡಿಕೊಂಡಿದ್ದರಿಂದ ನಾಗರಾಜು ಅದನ್ನು



ಪ್ರಶ್ನಿಸಿದ್ದಕ್ಕಾಗಿ ನಾನು ನನ್ನ ತಮ್ಮ, ತಾಯಿ-ಲಲಿತಮ್ಮ ರವರು ನಾಗರಾಜುರವರಿಗೆ

ಹೊಡೆದು, ಎಡಕೈಯನ್ನು ಮುರಿದು ಹಾಕಿದ್ದೇವು ಎಂದರೆ ಸರಿಯಲ್ಲ. ಸಾಕ್ಷಿಗೆ ನಾಗರಾಜು ಕೈ ಮುರಿದಿದ್ದಕ್ಕೆ ನೀವೆ ಅವರಿಗೆ ಚಿಕಿತ್ಸೆ ಕೊಡಿಸಿದ್ದೀರಿ ಎಂದರೆ ಸಾಕ್ಷಿಯು ಆತ ಅಪಘಾತದಲ್ಲಿ ಕೈ ಮುರಿದುಕೊಂಡಿದ್ದಕ್ಕೆ ನಾನು ಆತನಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದೆ ಎಂದು ಹೇಳುತ್ತಾರೆ.

18. ನಾಗರಾಜು ಆಸ್ಪತ್ರೆಯಿಂದ ಬಂದ ನಂತರ ತನ್ನಲ್ಲಿದ್ದ ಟಿ.ಟಿ. ವಾಹನಗಳನ್ನು ಮಾರಾಟ ಮಾಡಿ ಅದರಿಂದ ಬಂದ ರೂ. ಇಪ್ಪತ್ತು ಲಕ್ಷ ಹಣವನ್ನು ನನಗೆ, ನನ್ನ ತಾಯಿ ಮತ್ತು ನನ್ನ ತಮ್ಮನಿಗೆ ನೀಡಿದ್ದರು ಎಂದರೆ ಸರಿಯಲ್ಲ. ಆ ರೀತಿ ನಾಗರಾಜು ಹಣ ನೀಡಿದ್ದರಿಂದ ನಾನು, ನನ್ನ ತಮ್ಮ ಮತ್ತು ನನ್ನ ತಾಯಿಯವರು ಟಾಟ ಏಸ್ ವಾಹನವನ್ನು ಖರೀದಿ ಮಾಡಿ ಹಣ್ಣುಗಳ ವ್ಯಾಪಾರ ಮಾಡುತ್ತಿರುತ್ತೇವೆ ಎಂದರೆ ಸರಿಯಲ್ಲ.

19. ನಾವುಗಳು ಬಿಳ್ಳೂರು, ಸೋಮಂತಪಲ್ಲಿ, ಗೋರಂಟ್ಲ, ಲೇಪಾಕ್ಷಿ, ಚಿಲುಮಕ್ಕೂರಿನ ಸಂತೆಗಳಲ್ಲಿ ವ್ಯಾಪಾರ ಮಾಡುತ್ತೇವೆ. ನಮ್ಮ ಊರಿನಿಂದ ಬಿಳ್ಳೂರಿಗೆ ಹೋಗಬೇಕಾದರೆ ರಸ್ತೆ ಸರಿ ಇಲ್ಲದ ಕಾರಣ ಬಾಗೇಪಲ್ಲಿ ಮೂಲಕ



ನಾನು, ನನ್ನ ತಮ್ಮ ಹಾಗೂ ನನ್ನ ತಾಯಿ ಹೋಗುತ್ತಿದ್ದೇವು. ನನಗೆ ಚಿಕ್ಕಮಗು

ಇದಿದ್ದರಿಂದ ನನ್ನ ತಾಯಿ ನನ್ನೊಂದಿಗೆ ಬರಲೇ ಬೇಕಿತ್ತು. ನಾವು ಯಾವತ್ತು ನಮ್ಮೂರಿನಿಂದ ಬಾಗೇಪಲ್ಲಿ ಮೂಲಕ ಹೋಗುತ್ತಿರಲಿಲ್ಲ, ಶಾರ್ಟ್ ಕಟ್ ಆಗುತ್ತದೆ ಎಂದು ನಮ್ಮೂರಿನಿಂದ ಬಿಳ್ಳೂರಿಗೆ ಹತ್ತಿರದ ದಾರಿಯಲ್ಲಿ ಹೋಗುತ್ತಿದ್ದೇವು ಎಂದರೆ ಸರಿಯಲ್ಲ. ಆ ರೀತಿ ಹೋಗುತ್ತಿದ್ದ ಸಮಯ ಸದರಿ ವಾಹನ Skid ಆಗಿ ಬಿದ್ದು, ನಾನು, ನನ್ನ ತಮ್ಮ ಮತ್ತು ನನ್ನ ತಾಯಿ ಸದರಿ ಅಪಘಾತದಿಂದ ಗಾಯಗೊಂಡಿದ್ದು, ಸದರಿ ನನಗಾದ ಗಾಯವನ್ನು ಆಧಾರವಾಗಿಟ್ಟುಕೊಂಡು ಸುಳ್ಳಾಗಿ ಆರೋಪಿಯ ವಿರುದ್ದ ಈ ಪ್ರಕರಣವನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಸದರಿ ಘಟನೆ ನಡೆಯಿತು ಎನ್ನಲಾದ ದಿನ ಮಾಸ್ಕ್ ಧರಿಸಿದ್ದ ವ್ಯಕ್ತಿ ಹಲ್ಲೆ ಮಾಡಿರುತ್ತಾನೆ ಎಂದು ಹೇಳಿದ್ದೀರಾ ನಿಜ. ಸದರಿ ಮಾಸ್ಕ್ ಹಾಕಿದ್ದ ವ್ಯಕ್ತಿಯ ಮಾಸ್ಕ್ ನ್ನು ತೆಗೆದು ಯಾರು ಎಂದು ನೋಡಿದ್ದೇನೆಂದು ಪೊಲೀಸರಿಗೆ ಹೇಳಿದ್ದೀರಾ ಎಂದರೆ ಸಾಕ್ಷಿಯು ಹೇಳಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ಹೇಳಿಲ್ಲ ಎಂದರೆ ಸರಿಯಲ್ಲ.

1. ಮುಂದುವರೆದು ಪಾಟೀ ಸವಾಲನ್ನು ಆರೋಪಿಯ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ದಿನಾಂಕಃ 26.09.2025 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**